ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ದಿನಾಂಕ : DATE :

# ನೂತನ ಸಂಸತ್ ಭವನ ನಿರ್ಮಾಣ ಕಾಮಗಾರಿಗೆ ನಿನ್ನೆ ಅಧಿಕೃತ ಚಾಲನೆ



**ನವದೆಹಲಿ:** ಹಾಲಿ ಸಂಸತ್ ಭವನದ ಸಮೀಪದಲ್ಲೇ ನಿರ್ಮಾಣವಾಗಲಿರುವ ನೂತನ ಸಂಸತ್ ಭವನ ಕಾಮ ಗಾರಿಗಳಿಗೆ ಗುರುವಾರ ಚಾಲನೆ ನೀಡಲಾಗಿದೆ. ಭೂಮಿ ಪೂಜೆಗೂ ಮುನ್ನ ನಡೆಯಬೇಕಾದ ಕೆಲ ಕಾಮಗಾರಿ ಗಳಿಗೆ ಚಾಲನೆ ನೀಡುವ ಮೂಲಕ ಚಾಲನೆ ನೀಡಲಾಗಿ ದೆ. ಭೂಮಿಪೂಜೆ ನಡೆದ 22 ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳಿಸುವ ಉದ್ದೇಶವನ್ನು, ನಿರ್ಮಾಣ ಗುತ್ತಿಗೆ ಪಡೆದಿರುವ ಹೊಂದಿದೆ. ಕಟ್ಟಡ ಕಾಮಗಾರಿಗೆ ಅವಕಾಶ ಕಲ್ಪಿಸುವ ಸಲುವಾಗಿ ಈ ಭಾಗದಲ್ಲಿರುವ ಕೇಂದ್ರೀಯ ಲೋಕೋಪಯೋಗಿ ಇಲಾಖೆ ಯ ಕೆಲ ಕಚೇರಿಗಳು ಹಾಗೂ ವಿದ್ಯುತ್ ಸ್ಟೇಷನ್ ಅನ್ನು ಬೇರೆಡೆ ಸ್ಥಳಾಂತರಿಸ ಲಾಗಿದೆ.ಲೋಕಸಭೆ ಮತ್ತು ರಾಜ್ಯಸಭೆ ಕ್ಷೇತ್ರ ಗಳ ನ್ನು ಮರು ವಿಂಗಡಣೆ ಮಾ ಡಿದ್ದಲ್ಲಿ ಸಂಸದರ ಸಂಖ್ಯೆ ಹೆಚ್ಚಳ ವಾಗುವ ಸಾಧ್ಯತೆ ಯಿದೆ. ಹೀಗಾಗಿ, ನೂತನ ಸೆಂಟ್ರಲ್ ವಿಸ್ತಾ ಮರು ಅಭಿವೃದ್ಧಿ ಯೋಜನೆಯಡಿ ತ್ರಿಭುಜಾಕಾರ ದಲ್ಲಿ ನೂತನ ಸಂಸತ್ತಿನ ಕಟ್ಟಡದಲ್ಲಿ ಸುಮಾರು 1400 ಸಂಸದರಿಗೆ ಆಸನದ ವ್ಯವಸ್ಥೆ ಕಲ್ಪಿಸುವಂತೆ ವಿನ್ಯಾಸ ಮಾಡಲಾಗುತ್ತಿ ದೆ. ನೂತನ ಸಂಸತ್ತಿನ ಕಟ್ಟಡ ಕಾಮಗಾರಿ ಪೂರ್ಣವಾ ಗುವವರೆಗೂ ಹಾಲಿ ಸಂಸತ್ತಿನ ಕಟ್ಟಡದಲ್ಲೇ ಸರ್ಕಾರಿ ಕಾರ್ಯಗಳು ನಡೆಯಲಿವೆ. ಯೋಜನೆ ಪೂರ್ಣಗೊಂ ಡ ಬಳಿಕ ಹಾಲಿ ಕಟ್ಟಡವನ್ನು ಇತರ ಉದ್ದೇಶಕ್ಕೆ ಬಳಸಿಕೊಳ್ಳಲಾಗುತ್ತದೆ ಎಂದು ಕೇಂದ್ರ ಲೋಕೋಪಯೋಗಿ ಇಲಾಖೆ ಹೇಳಿದೆ.